# ಮಹಾಪರಿನಿಬ್ಬಾಣ

ವಿಶ್ವದ ಮಹಾದಾರ್ಶನಿಕರ ಕೊನೆಯ ದಿನಗಳು ಹೇಗಿದ್ದವು? ಎಂಬುದು ಬಲು ಸೂಕ್ಷ್ಮ ವಿಚಾರ. ಬುದ್ಧ, ಏಸುಕ್ರಿಸ್ತ, ಸಾಕ್ರಟೀಸ್ ಇನ್ನೂ ಮುಂತಾದವರು ಸಾವಿನ ತೀವ್ರ ಕ್ಷಣಗಳಲ್ಲಿ ಹೇಗೆ ಪ್ರತಿಸ್ಪಂದಿಸಿದರು? ಆ ಸಂದರ್ಭದಲ್ಲಿ ಪ್ರಕೃತಿಯ ಸ್ಪಂದನ, ಸುತ್ತ–ಮುತ್ತಲಿನವರ ಪ್ರತಿಕ್ರಿಯೆ ಹೇಗಿತ್ತು ಎಂಬುದೂ ವಿಚಾರಾರ್ಹ ಸಂಗತಿ. ಇವರ ಕೊನೆಯ ದಿನಗಳನ್ನು 'ಸಾವು' ಎಂಬ ಸಾಮಾನ್ಯಪದ ಸರಿಯಾದ ರೀತಿಯಲ್ಲಿ ವ್ಯಂಜಿಸಲು ಸಾಧ್ಯವೆ?' ಈ ಪ್ರಶ್ನೆ ನನ್ನ ಮಟ್ಟಿಗೆ ಪ್ರಮುಖವಾದುದು. ಸಾಮಾನ್ಯರ ಕೊನೆಯ ದಿನಗಳು 'ಸಾವು' ಎನಿಸಿಕೊಂಡರೆ; ಮಹಾಪುರುಷರ, ಮಹಾದಾರ್ಶನಿಕರ, ಮಹಾಸಂತರ ಕೊನೆಯ ದಿನಗಳನ್ನು 'ಮಹಾಪರಿನಿರ್ವಾಣ' ಎಂದು ಕರೆಯುವುದೇ ಸೂಕ್ತ.

**ನಿಬ್ಬಾಣ–1**

ಏಸು ಮಹಾಪ್ರಭು ಕ್ರಿ.ಪೂ.ದಲ್ಲಿ ಇದ್ದವನು. ಅವನು ಯಾವ ತಪ್ಪೂ ಮಾಡಿಲ್ಲದೆ ಹೋದರೂ ಸುಖಾಸುಮ್ಮನೆ ಸಿಲುಬೆಗೆ ಏರಿಸಿದರು. ಅದೊಂದು ರುದ್ರರೂಪದ ದೃಶ್ಯ. ಪಿಲಾತರು ಅವನ ಮೇಲೆ ದಂಡನೆ ಹೇರಿದರು. ಅವನು ಸಿಲುಬೆಯನ್ನು ಹೊತ್ತು ನಡೆದನು. ಅನಂತರ ಅವನ ತಲೆಗೆ ಕೆಂಪು ಹಚ್ಚಡ ಹೊದಿಸಿ, ತಲೆಯ ಮೇಲೆ ಮುಳ್ಳಿನ ಕಿರೀಟವನ್ನು ಇಟ್ಟರು. ಅವನ ಬಲಗೈಗೆ ಬೆತ್ತವನ್ನು ಕೊಟ್ಟರು. 'ಯಹೂದ್ಯರ ಅರಸನೇ ಸ್ವಸ್ತಿ' ಎನ್ನುತ್ತ ಅವನ ಮುಂದೆ ಮೊಣಕಾಲೂರಿ ಅವನ ಮೇಲೆ ಉಗುಳಿದರು. ಅವನು ಹಿಡಿದುಕೊಂಡಿದ್ದ ಬೆತ್ತದಿಂದಲೇ ಅವನನ್ನು ಹೊಡೆದರು. ಆಮೇಲೆ ಅವನ ಬಟ್ಟೆಯನ್ನು ಅವನಿಗೆ ತೊಡಿಸಿದರು. ಅವನನ್ನು ಸಿಲುಬೆಗೆ ಏರಿಸುವುದಕ್ಕೆ ಜೆರುಸಲೇಂನ ಹೊರಗಿದ್ದ 'ಗೊಲ್ಗೊಥಾ' ಎಂಬ ದಿನ್ನೆಗೆ ಕರೆದುಕೊಂಡು ಹೋದರು. ಅಂದು ಶುಕ್ರವಾರ, ನಡುಹಗಲು. ಏಸುವನ್ನು ಸಿಲುಬೆಯಲ್ಲಿ ತೂಗಿಸಿದರು. ಅಲ್ಲಿ ಸುತ್ತ–ಮುತ್ತ ಇದ್ದ ಯಾಜಕರೂ ಶಾಸ್ತ್ರಿಗಳೂ ಹಿರಿಯರೂ ಆತನಿಗೆ ಬಾಯಾರೆ ಕಟಕಿಯಾಡಿದರು. ಆದರೆ, ಏಸುಪ್ರಭು ಅವರನ್ನೆಲ್ಲ ಕ್ಷಮಿಸಿಬಿಟ್ಟನು. ನಡುಹಗಲಿನಿಂದ ಮುಂದೆ ಮೂರು ತಾಸು, ದಟ್ಟನೆಯ ಕತ್ತಲು ಕವಿಯಿತು. ಆಗ ಏಸು 'ಎಲೀ ಎಲೀ ಲಮ್ಮಾ ಸಬಕ್ಥಾನಿ' ಎನ್ನುತ್ತ ತುಸು ಹೊತ್ತು ಮೌನವಾದನು. ಅನಂತರ 'ತಂದೆಯೇ ನನ್ನ ಆತ್ಮವನ್ನು ನಿನಗೆ ಒಪ್ಪಿಸುತ್ತೇನೆ' ಎಂದು ನುಡಿಯುತ್ತ ಪ್ರಾಣವನ್ನು ತ್ಯಜಿಸಿದನು. ಆಗ ಭೂಮಿ ಅದುರಿತು. ಕಪ್ಪಾನೆ ಕತ್ತಲು ಕವಿದು ಶೋಕ ಹೆಚ್ಚಿತು. ಕಾವಲಿನ ರೋಮಿನ ಶತಾಧಿಪತಿ ಇದನ್ನು ಕಂಡು 'ಈತ ದೇವರ ಕುಮಾರನೇ ಸರಿ' ಎಂದು ಸಾರಿದನು. ನೋಡ ಬಂದವರೆಲ್ಲ ಮಮ್ಮಲ ಮರುಗಿದರು. ಮಗ್ದಲದ ಮೇರಿಯು ತುಸು ದೂರದಲ್ಲಿ ಇದ್ದು ಸಿಲುಬೆಯಲ್ಲಿ ಕಣ್ಣು ಮುಚ್ಚಿದ್ದ ಯೇಸುವಿನ ಮುಖವನ್ನೇ ದಿಟ್ಟಿಸುತ್ತಿದ್ದಳು. ಅಷ್ಟರಲ್ಲಿ ಹುಣ್ಣಿಮೆಯ ತಿಂಗಳು ಮೂಡಿತು.

**ನಿಬ್ಬಾಣ–2**

ಬುದ್ಧನು ಕಕ್ಕುತ್ಥಾ ನದಿಯಲ್ಲಿ ಮಿಂದು ಅಲ್ಲಿಯೇ ಮಗ್ಗುಲಲ್ಲಿದ್ದ ಆಮ್ರವನ್ನು ಹೊಕ್ಕು ತುಸುಹೊತ್ತು ವಿಶ್ರಮಿಸಿಕೊಂಡನು. ಚುಂದನು ಕೊಟ್ಟ ಸೂಕರ ಮದ್ದವನ್ನು ಉಂಡನು. ಅಂದಿನ ಇಳಿಹೊತ್ತಿಗೆ ಕುಶಿನಾರಕ್ಕೆ ಬಂದು ಮಲ್ಲರ ಸಾಲವನಕ್ಕೆ ಹೋಗಿ ಉತ್ತರಾಭಿಮುಖವಾಗಿ ಮಲಗಿಕೊಂಡನು. ಆಗ ಆನಂದನು ಕೇಳಿದ ಪ್ರಶ್ನೆಗಳಿಗೆ ಬುದ್ಧನು ಉತ್ತರಕೊಟ್ಟನು. ತಾನಿನ್ನು ಪರಿನಿರ್ವಾಣಕ್ಕೆ ಹೊರಡುವೆನೆಂದು ಅವನಿಗೆ ತಿಳಿಸಿದನು. ಅಲ್ಲಿಗೆ ಬಂದ ಮಲ್ಲರಿಗೆ ಧರ್ಮೋಪದೇಶ ಕೊಟ್ಟನು. ಸುಭದ್ರನೆಂಬ ಪರಿವ್ರಾಜಕನು ಬಂದು ಬುದ್ಧನಿಂದ 'ಧಮ್ಮದೇಸನ' ಪಡೆದನು. ಅವನಿಗೆ ಆನಂದನಿಂದ ಪ್ರವ್ರಜ್ಯೆಯನ್ನು ಕೊಡಿಸಿ, ಭಿಕ್ಖುಸಂಘಕ್ಕೆ ಸೇರಿಸಿದನು. ಅನಂತರ 'ಈ ದೇಹ ನಾಶಕ್ಕೆ ಈಡಾದದ್ದು, ಸಾವಧಾನದಿಂದ ಉದ್ಯೋಗಿಸಿರಿ' ಎಂದು ಕೊನೆಯ ಮಾತನ್ನು ಹೇಳುತ್ತ ಕ್ರಮವಾಗಿ ಪ್ರಥಮದಿಂದ ಚತುರ್ಥದವರೆಗೂ ಧ್ಯಾನಗಳನ್ನೂ ವಿವಿಧಾಯತನಗಳನ್ನೂ ಸಮಾಪದಿಸಿದನು. ಸಂಜ್ಞಾನಿರೋಧ ಸಮಾಧಿಯಲ್ಲಿದ್ದು, ಅಲ್ಲಿಂದ ಪುನಃ ಅನುಕ್ರಮವಾಗಿ ಚತುರ್ಥದಿಂದ ಪ್ರಥಮದವರೆಗೂ ಧ್ಯಾನಗಳನ್ನು ಸಮಾಪದಿಸಿ 'ವೈಶಾಖಿ'ಯ ಕ್ರಿ.ಪೂ. 501. ಏಪ್ರಿಲ್ 15ನೇ ತಾರೀಖು ಕುಜವಾರದ ಪೂರ್ಣಿಮೆಯ ಕೊನೆಯ ಜಾವದಲ್ಲಿ ಬುದ್ಧಭಗವಂತನು ಪರಿನಿರ್ವಾಣವನ್ನು ಹೊಂದಿದನು. ಆಗ ಭೂಕಂಪವಾಯಿತು. ದೇವದುಂದುಭಿ ಮೊಳಗಿತು. ಮೇಘ ನಿರ್ಘೋಷವಾಯಿತು, ವಿದ್ಯುದಾವಿರ್ಭಾವವಾಯಿತು, ಮುಹೂರ್ತ ಮಾತ್ರದಲ್ಲಿಯೇ ಧಾರಾಸಂಪಾತವಾಯಿತು. ಆನಂದ ಮತ್ತಿತರ ಭಿಕ್ಖುಗಳು ಆ ಮಹಾಘಟನೆ ಕುರಿತು ಗಾಥೆಗಳನ್ನು ಉದ್ಗರಿಸಿದರು.

**ನಿಬ್ಬಾಣ–3**

ಅಥೆನ್ಸಿನವರು ಸಾಕ್ರಟೀಸನನ್ನು ವಿಷಕೊಟ್ಟು ಕೊಂದರು. ಅಥೆನ್ಸಿನವರು ಆತನಿಗೆ ಮರಣದಂಡನೆ ನೀಡಿದಾಗ, ಅವರ ಆಜ್ಞೆಯ ಪ್ರಕಾರ ವಿಷವನ್ನು ಸಿದ್ಧಪಡಿಸಿಕೊಡುವವನು ವಿಷಪಾತ್ರೆ ತಂದನು. ಆ ವಿಷವನ್ನು ಹೇಗೆ ಕುಡಿಯಬೇಕೆಂಬುದನ್ನು ಸಾಕ್ರಟೀಸ್ ಅವನಿಂದ ತಿಳಿದುಕೊಂಡನು. ಅವನಲ್ಲಿ ಕಿಂಚಿತ್ತೂ ಅಂಗವಿಕಾರವಾಗಲಿ, ವರ್ಣವಿಕಾರವಾಗಲಿ ಇರಲಿಲ್ಲ. ಸಾಕ್ರಟೀಸನು ಸ್ಥಿರಬುದ್ಧಿಯಿಂದ ವಿಷಪಾತ್ರೆಯನ್ನು ಕೈಗೆತ್ತಿಕೊಂಡನು. ಒಳಗಿನದನ್ನು ಮೊದಲು ದೇವತೆಗೆ ಅರ್ಪಿಸಿ ಕೃತಕೃತ್ಯನಾದನು. ಬಳಿಕ ಅದನ್ನು ತುಟಿಗೆತ್ತಿ ಶಾಂತಚಿತ್ತನಾಗಿ ಸುಮನಸ್ಸಿನಿಂದ ಕುಡಿದು ಮುಗಿಸಿದನು. ಅವನ ಸುತ್ತ–ಮುತ್ತ ನೋಡುತ್ತ ನಿಂತವರ ದುಃಖ ಉಕ್ಕಿ ಬಂದಿತು. ಕಣ್ಣೀರು ಕಟ್ಟೆಯೊಡೆಯಿತು. ಆಗ ಸಾಕ್ರಟೀಸ್ 'ಇದೇನು ಮಿತ್ರರೆ, ಸಾಯುವವನು ಶಾಂತವಾಗಿ ಸಾಯಬೇಕೆಂದು ಕೇಳಿದ್ದೇನೆ. ಆದ್ದರಿಂದ ಶಾಂತರಾಗಿ ತಡೆದುಕೊಳ್ಳಿ' ಎಂದನು. ಕಾಲು ಭಾರವಾಗುವ ವರೆಗೂ ನಡೆಯುತ್ತಿದ್ದು–ಅನಂತರ ಬೆನ್ನಡಿಯಾಗಿ ಮಲಗಿಕೊಂಡನು. ವಿಷವು ಕ್ರಮೇಣ ಮೇಲುಮೇಲಕ್ಕೇರಿತು. ಸೊಂಟದ ಬಳಿ ತಣ್ಣಗಾಗುವ ಹೊತ್ತಿಗೆ ಮುಖದ ಮೇಲಿನ ಮುಸುಕನ್ನು ತೆಗೆದು ತನ್ನ ಗೆಳೆಯ ಕ್ರೀಟೀಗೆ 'ಅಸ್‌ಕ್ಲೇಪಿಯಸ್ ದೇವತೆಗೆ ಕೋಳಿಯೊಂದನ್ನು ಒಪ್ಪಿಸಬೇಕು, ಮರೆಯಬೇಡ' ಎಂದನು. ಇದೇ ಅವನ ಕೊನೆಯ ಮಾತಾಯಿತು. ಈ ಮೂರು ಪ್ರಸಂಗಗಳು ಗೀತೆ ಹೇಳುವ 'ಸ್ಥಿತಪ್ರಜ್ಞ' ಲಕ್ಷಣಗಳಿಗೆ ಕುರುಹುಗಳನ್ನು ಒದಗಿಸುತ್ತವೆ. ಯೇಸು ಮತ್ತು ಸಾಕ್ರಟೀಸರ ಕೊನೆಯ ದಿನಗಳು ರುದ್ರಶಾಂತವಾದರೆ; ಬುದ್ಧನದು ಶುಭ್ರಶಾಂತವಾಗಿ ಕಾಣುತ್ತದೆ. ಇದು ಜೀವರಹಸ್ಯದ ನೆಲೆಯನ್ನು ನಮಗೆ ಪ್ರತ್ಯಕ್ಷವಾಗಿ ತೋರಿಸುತ್ತದೆ!

■ **ಪುರಂಜೀವಿ**

## ಮಾತೇ ಮುತ್ತು

- ಹೂವ ಹಡಲಿಗೆಯನ್ನು ಹೊತ್ತ
  ಭೂಮಿತಾಯಿ ಜೋಗಿತಿ
  ಮೈ ತುಂಬಿ ಕುಣಿಯುತಿಹಳ–
  ನಂತ ಕಾಲವೀ ಗತಿ.

  –ಬೇಂದ್ರೆ

- ಶಿಕ್ಷಣ ಎಂದರೆ ಕೇವಲ ಜ್ಞಾನವನ್ನು ಒದಗಿಸುವುದಲ್ಲ. ಪ್ರಶ್ನಿಸುವುದನ್ನು, ಕೇಳಿ ತಿಳಿದುಕೊಳ್ಳುವುದನ್ನು ಕಲಿಸಿಕೊಡುವುದು.

  –ಜಿಡ್ಡು ಕೃಷ್ಣಮೂರ್ತಿ

- ಶ್ರಾವಣ ಸಂಧ್ಯಾ ಸಮಯ ಸಮೀರನು
  ಆಮಂದಗಮನದಿ ಬರುತಿಹನು
  ಸುಯ್ಯನೆ ಬೀಸಿ ಬರುತಿಹನು.

  –ಕುವೆಂಪು

- ಮನೆ ನಿಂತಿರುವುದು ಮಡದಿಯಿಂದ, ಅದು ಬಿದ್ದರೆ ಗಂಡನ ತಲೆ ಮೇಲೆ.

  –ಬೀಚಿ

- ನಮ್ಮ ಹಕ್ಕುಗಳಿಗಾಗಿ ಹೋರಾಡಲು ಎಲ್ಲಿ ಅವಕಾಶ ಇದೆಯೋ ಅಲ್ಲಿ ಪ್ರಜಾಪ್ರಭುತ್ವ ಇದೆ ಎಂದೇ ಅರ್ಥ.

  –ರೋಜರ್ ನಾಶ್ ಬಾಲ್ಡ್‌ವಿನ್

- ಕಲಿಕೆ ವಿಷಯ ಬರೀ ತಿಳಿವಳಿಕೆಯ ಮಟ್ಟದಲ್ಲಿ ಉಳಿಯದೆ ಹೆಚ್ಚು ಅರ್ಥಪೂರ್ಣ ಮಾಡಬಲ್ಲ ಮನುಷ್ಯನೊಬ್ಬ ಬೇಕು. ಆತನೇ ಗುರು.

  –ಪಿ. ಲಂಕೇಶ್